## ಹೆಣ್ಣು ಎಂಬ ಪ್ರಜ್ಞೆಯ ಕೆಂಡ

ಶಿಶುವಿನ ಸಾಮಾಜೀಕರಣ ಹೇಗಿದೆಯೆಂದರೆ ಹೆಣ್ಣುಶಿಶು ಬೆಳವಣಿಗೆಯ ಪ್ರತಿ ಹಂತದಲ್ಲೂ ಗಂಡಿಗಿಂತ ತಾನು ಹೇಗೆ ಭಿನ್ನ ಎಂದು ತಿಳಿದು ಅರಗಿಸಿಕೊಳ್ಳುತ್ತ, ಅವನ್ನೆಲ್ಲ ಪಾಲಿಸುತ್ತ ಬೆಳೆಯುವಂತಾಗಿದೆ. ಕೂರುವ, ಏಳುವ, ಮಲಗುವ ಶೈಲಿಯಿಂದ ಹಿಡಿದು, ಆಡುವ ಮಾತಿನ ಭಾಷಾಪ್ರಯೋಗದ ತನಕ; ಮುಖಾಲಂಕಾರದಿಂದ ಹಿಡಿದು ಆಯ್ಕೆ ಮಾಡಿಕೊಳ್ಳಬೇಕಾದ ದಿರಿಸಿನ ತನಕ; ಕಲಿಯಬೇಕಾದ ಶಿಕ್ಷಣದಿಂದ ಹಿಡಿದು ಆಯ್ದುಕೊಳ್ಳಬೇಕಾದ ಕೆಲಸದ ತನಕ; ಪ್ರತಿ ತಿರುವಿನಲ್ಲೂ ಕಂಕುಳಲ್ಲಿ ನಾನು ಹೆಣ್ಣು ಎಂಬ ಪ್ರಜ್ಞೆಯ ಕೆಂಡವನ್ನಿಟ್ಟುಕೊಂಡೇ ಹೆಣ್ಣು ತಿರುಗಬೇಕಾಗಿದೆ. ಎಲ್ಲದರಲ್ಲಿ ಹಾಸುಹೊಕ್ಕಾದ ಹೆಣ್ಣುಪ್ರಜ್ಞೆ ತನ್ನನ್ನು ತಾನು ಪರಿಭಾವಿಸುವುದರಲ್ಲಿಯೂ, ಶಕ್ತಿ ಸಾಮರ್ಥ್ಯ ಅಳೆದುಕೊಳ್ಳುವಲ್ಲಿಯೂ, ತನ್ನ ಕಾಯಿಲೆ ಗ್ರಹಿಸುವಲ್ಲಿಯೂ, ವಿಶ್ರಾಂತಿಚಿಕಿತ್ಸೆ ಪಡೆಯುವಲ್ಲಿಯೂ ತನ್ನ ಪ್ರಭಾವ ಬೀರುತ್ತದೆ. ಹಾಗಾಗಿ ದೇಹಮಗ್ನತೆಯ ಲವಲೇಶವೂ ಇಲ್ಲದೇ ದುಡಿಯುವ ಯಂತ್ರಗಳಾಗಿರುವ ಮಹಿಳೆಯರ ದೇಹ, ಆರೋಗ್ಯ ಕುರಿತ ವಿಷಯಗಳನ್ನು ಆದ್ಯತೆಯ ಮೇಲೆ ತಿಳಿಸಬೇಕಾದ ಅವಶ್ಯಕತೆಯಿದೆ.




ಜೀರ್ಣವಾಗಿ ಹೋಗುತ್ತದೆ. ನಂತರ ಗರ್ಭಕೋಶದ ಒಳಪದರವೂ ಸಂಕುಚಿತಗೊಳ್ಳುತ್ತಾ ಹೋಗಿ, ಎರಡು ವಾರಗಳ ಬಳಿಕ ರಕ್ತಸ್ರಾವದೊಂದಿಗೆ ಹೊರಹೋಗುತ್ತದೆ. ಗರ್ಭಕೋಶದ ಒಳಪದರ ಮತ್ತು ರಕ್ತದ ಮಿಶ್ರಣವೇ ಮುಟ್ಟು. ಪ್ರತಿ ತಿಂಗಳು 15ರಿಂದ 60 ಮಿ.ಲೀ. ರಕ್ತ ಹಾಗೂ 12 ಮಿ. ಗ್ರಾಂನಷ್ಟು ಕಬ್ಬಿಣಾಂಶ ಮುಟ್ಟಿನಲ್ಲಿ ವ್ಯಯವಾಗುತ್ತದೆ.

ಒಟ್ಟಾರೆ ಹೇಳುವುದಾದರೆ ಮೂರಿಂಚು ಉದ್ದ, ಎರಡಿಂಚು ಅಗಲ, ಒಂದಿಂಚು ದಪ್ಪ ಇರುವ, 40–50 ಗ್ರಾಂ ತೂಗುವ ಪುಟಾಣಿ ಗರ್ಭಕೋಶವು ಪ್ರತಿ ತಿಂಗಳೂ ಫಲಿತಗೊಳ್ಳಬಹುದಾದ ಅಂಡಕ್ಕಾಗಿ ಒಳಪದರ ಬೆಳೆಸಿಕೊಂಡು ಸರ್ವ ಸಿದ್ಧತೆ ಮಾಡಿಕೊಳ್ಳುತ್ತದೆ. ಗರ್ಭ ಕಟ್ಟದೇ ಹೋದಾಗ ಒಳಪದರ ಕಳಚಿ ನಾಲ್ಕೈದು ದಿನಗಳಲ್ಲಿ ಹೊರಹರಿಯುತ್ತದೆ. ಮತ್ತೆ ಮುಂದಿನ ತಿಂಗಳು ಬರಬಹುದಾದ ಅಂಡಕ್ಕಾಗಿ ತಯಾರಿ ಶುರುವಾಗುತ್ತದೆ. ಈ ಚಕ್ರ ಮಹಿಳೆ 40–45 ವರ್ಷ ತಲುಪುವವರೆಗೆ ಮುಂದುವರೆಯುತ್ತದೆ. ನಡುವೆ ಒಂಬತ್ತು ಮುಟ್ಟು ಹಾಳು ಮಾಡಿ ಮುತ್ತಾಳ, ಮುತ್ತಾಳಿಯರು ಹುಟ್ಟುವ ಸಾಧ್ಯತೆಯಿದೆ!

ಇದು ಕಾಲಚಕ್ರ. ಇದು ಋತುಚಕ್ರ.

ನಂಬಿ...

### 1

ಒಂದು ಭಯಂಕರ ಮಳೆಗಾಲ. ತೂಫಾನು ಎದ್ದು ಮೀನುಗಾರಿಕೆಗೆಂದು ಸಮುದ್ರಕ್ಕೆ ಹೋದ ಒಂದೇ ಕೇರಿಯ ನಾಲ್ಕು ಮನೆಗಳ ಹುಡುಗರು ವಾಪಸು ಬರಲಿಲ್ಲ. ಶವಗಳೂ ಸಿಗಲಿಲ್ಲ. ಹುಡುಗರು ಬದುಕಿ ದಡ ಸೇರಿದರೋ ಮುಳುಗಿಹೋದರೋ ಎಂದು ಹದಿನೈದು ದಿನ, ತಿಂಗಳು ಕಳೆದರೂ ತಿಳಿಯಲಿಲ್ಲ. ಕೊನೆಗೆ ಹಿಟ್ಟಿನ ಬೊಂಬೆ ಮಾಡಿ ಶವಸಂಸ್ಕಾರ ವಿಧಿಗಳು ನೆರವೇರಿದವು. ಕೇರಿಗೆ ಕೇರಿಯೇ ದುಃಖಸಾಗರದಲ್ಲಿ ಮುಳುಗಿಹೋಯಿತು. ತಮಗೇಕೆ ಇಂತಹ ವಿಪತ್ತು ಬಂದಿತೆಂದು ದೇವರಲ್ಲಿ 'ಪ್ರಶ್ನೆ' ಕೇಳಿದರು. ಪ್ರತಿ ವರ್ಷ ಮಾಡುವ ಉತ್ಸವದ ಸಮಯದಲ್ಲಿ ಯಾರೋ ಮುಟ್ಟಾದ ಹೆಂಗಸರು ಒಳಬಂದು ಲೋಪವಾಗಿದೆಯೆಂದು ಉತ್ತರ ಬಂತು. ಸರಿ, 'ಆ ದಿನ' ಯಾರು ಮುಟ್ಟಾಗಿದ್ದಿರಬಹುದು ಎಂಬ ತನಿಖೆ ಶುರುವಾಯಿತು. ಸಾಕ್ಷ್ಯ ದೊರಕದೆ, ಯಾವ ಬಲಿಪಶುವೂ ಸಿಗದೇ ಕೊನೆಗೆ ಮತ್ತೊಮ್ಮೆ ದೇವರ ಉತ್ಸವ ಮಾಡುವುದೆಂದು ನಿರ್ಧಾರವಾಯಿತು.

ಇನ್ನುಮುಂದೆ ಯಾರ ಮುಟ್ಟಿನ ತಾರೀಕು ಯಾವಾಗಲಾದರೂ ಇರಲಿ, ಹಬ್ಬದ ದಿನ ಕೇರಿಯ ಎಲ್ಲ ಹೆಣ್ಣುಗಳೂ ಮುಟ್ಟಾಗದಂತೆ ಮಾತ್ರೆ ನುಂಗಲೇಬೇಕೆಂದು ಹಿರಿಯನಿಂದ ಆಜ್ಞೆ ಹೊರಟಿತು!

### 2

ಮಲೆನಾಡಿನ ಆ ಹಳ್ಳಿಯಲ್ಲಿ ಕಾರಣಾಂತರಗಳಿಂದ ಗ್ರಾಮದೇವರ ಹಬ್ಬದ ಆಚರಣೆ ನಿಂತುಹೋಗಿತ್ತು. ಆ ಹಬ್ಬ ನಡೆಯುವ ದೀಪಾವಳಿ ಅಮಾವಾಸ್ಯೆಯಿಂದ ಭೂಮಿಹುಣ್ಣಿಮೆಯವರೆಗಿನ ಎರಡು ವಾರ ಕಾಲ ಗ್ರಾಮದೇವನನ್ನು ಪ್ರತಿಷ್ಠಾಪಿಸಿ, ಕೂರಿಸಲಾಗುತ್ತಿತ್ತು. ಆ ಕಾಲದಲ್ಲಿ ಮುಟ್ಟಾದ ಹೆಂಗಸರು, ಬಾಣಂತಿಯರು, ಸೂತಕಕ್ಕೆ ಒಳಗಾದ ಯಾರೂ ಊರೊಳಗೆ ಬರುವಂತಿರಲಿಲ್ಲ. ಅದೇ ಗ್ರಾಮದ ವಾಸಿಗಳಾದರೂ ಮೈಲಿಗೆಯಾದರೆ ಊರ ಹೊರಗಿನ ಬಿಡಾರದಲ್ಲಿರಬೇಕು. ಹದಿನೈದು ದಿನದ ಗ್ರಾಮದೇವರ ಆಚರಣೆ, ಬಲಿ ಎಲ್ಲ ಮುಗಿದು ದೇವನು ಭೂಮಿಯೊಳಗಿನ ಸ್ವಸ್ಥಾನ ತಲುಪಿದ ಮೇಲೆ ಒಂದು ಕುಶಾಲು ಪಟಾಕಿ ಸಿಡಿಸಿ ಊರ ಹೊರಗಿರುವವರು ಊರೊಳಗೆ ಬರುವಂತೆ ಸಂಕೇತ ಕಳಿಸುತ್ತಿದ್ದರು. ಶಾಲೆಯ ಟೀಚರು, ಆರೋಗ್ಯ ಕಾರ್ಯಕರ್ತೆಯರು, ವಿದ್ಯಾರ್ಥಿನಿಯರು ಎಲ್ಲರಿಗೂ ಇದು ಅನ್ವಯಿಸುತ್ತಿತ್ತು.

ಧರ್ಮರಕ್ಷಕರೊಬ್ಬರ ಸಲಹೆಯಂತೆ 'ಊರೊಳ್ಳೆಯ'ದಕ್ಕಾಗಿ ನಿಂತಿದ್ದ ಹಬ್ಬ ಈಗ ಮತ್ತೆ ಶುರುವಾಗಿದೆ. ಮುಟ್ಟಿನ ಹೆಸರಲ್ಲಿ ಮೌಢ್ಯ ಹರಡುತ್ತಿದೆಯೆಂದು ಮಾಧ್ಯಮದವರ, ಮಾನವ ಹಕ್ಕು ಹೋರಾಟಗಾರರ ಕಡೆಯಿಂದ ತೀಕ್ಷ್ಣ ಪ್ರತಿಕ್ರಿಯೆಯೂ ಬರುತ್ತಿದೆ. ಇದು ಮೌಢ್ಯವೋ ಪರಂಪರೆಯೋ ಭಕ್ತಿಯೋ ತಾರತಮ್ಯವೋ ಎಂದು ಕೇಳಿಕೊಂಡರೆ ಎಲ್ಲವೂ ಆಗಿ ಕಾಣುತ್ತಲಿದೆ.

### 3

ಒಂದುದಿನ ನವದಂಪತಿಗಳು ತುಂಬ ದುಗುಡಗೊಂಡವರಾಗಿ ಆಸ್ಪತ್ರೆಗೆ ಬಂದರು. ಮದುವೆಯಾಗಿ ಎರಡು ವಾರ ಕಳೆಯುತ್ತ ಬಂದರೂ ಅವರ ನಡುವೆ ದೈಹಿಕ ಸಂಪರ್ಕ ಸಾಧ್ಯವಾಗಿರಲಿಲ್ಲ. ಅವಳು ಭಯಗೊಂಡಿದ್ದಳು, ಅವನು ಕಸಿವಿಸಿಗೊಂಡಿದ್ದ. 'ಸ್ವಲ್ಪವೂ